# ಆರಂಭಿಕ ಭಾಷೆ ಹಾಗೂ ಸಾಕ್ಷರತೆ-
# ದೃಷ್ಟಿ ನಿರೂಪಣೆಯ ಕರಡು

## ಅಧ್ಯಾಯ 4
## ಭಾಷೆ ಮತ್ತು ಸಾಕ್ಷರತಾ ಶಿಕ್ಷಣದ ಗುರಿಗಳು

ಭಾಷೆ ಮತ್ತು ಸಾಕ್ಷರತಾ ಶಿಕ್ಷಣದ ಗುರಿಗಳು ಒಟ್ಟಾರೆಯಾಗಿ ಶಿಕ್ಷಣದ ಗುರಿಗಳೊಂದಿಗೆ ನಿಕಟ ಸಂಬಂಧ ಹೊಂದಿರಬೇಕಾಗಿದೆ. ಮಾನವನ ಬದುಕಿನಲ್ಲಿ ಶಿಕ್ಷಣಕ್ಕೆ ಒಂದು ಸ್ವರೂಪಗತ, ವಿಮೋಚನಾಶೀಲ ಮತ್ತು ಸಾಧನಭೂತ ಮೌಲ್ಯವಿದೆ. ಈ ಎಲ್ಲವಕ್ಕೂ ಶಿಕ್ಷಣವು ಮಾನವನು ವಿಭಿನ್ನ ರೀತಿಗಳಲ್ಲಿ ಏಳಿಗೆ ಹೊಂದಲು ಒಂದು ಸಾಧನವನ್ನು ಒದಗಿಸುತ್ತದೆ ಎಂಬುದು ಒಂದು ಸಾಮಾನ್ಯ ಕಲ್ಪನೆ. ಪ್ರಜಾಸತ್ತಾತ್ಮಕ ಸಮಾಜಗಳು ಮಾನವನ ಏಳಿಗೆಯನ್ನು ಅಂತರ್-ಸಂಬಂಧಿತ ಮೌಲ್ಯಗಳ ಒಂದು ಸಮುಚ್ಚಯದ ಬೆಳವಣಿಗೆಯೊಂದಿಗೆ ತಳಕು ಹಾಕುತ್ತವೆ (ಉದಾಹರಣೆಗೆ ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆಗೆ ಬದ್ಧತೆ, ಇನ್ನೊಬ್ಬರ ಒಳಿತನ್ನು ಬಯಸುವುದು ಇತ್ಯಾದಿ - NCF (ಎನ್‌ಸಿಎಫ್), 2005); ಸಾಮರ್ಥ್ಯಗಳು (ಉದಾಹರಣೆಗೆ ಸ್ವತಂತ್ರವಾಗಿ ಆಲೋಚಿಸುವ ಶಕ್ತಿ ಸಾಮರ್ಥ್ಯ ಮತ್ತು ಕಲಿಯುವುದನ್ನು ಕಲಿಯುವುದು); ಮತ್ತು ಆರ್ಥಿಕ ಮತ್ತು ಪೌರ ಚಟುವಟಿಕೆಗಳಲ್ಲಿ ಭಾಗಿಯಾಗಲು ಪೂರ್ವಸಿದ್ಧತೆ ನಡೆಸುವುದು.

ಶಿಕ್ಷಣದ ಈ ವಿಶಾಲ ವ್ಯಾಪ್ತಿಯ ಗುರಿಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ನಾವು, ಓದು-ಬರಹ ಕಲಿಯುವ ನಿಟ್ಟಿನಲ್ಲಿ ಕೌಶಲಗಳ ಬೆಳವಣಿಗೆಯು ಒಂದು ಅಗತ್ಯವಾದ ಹೆಜ್ಜೆಯಾದರೂ ಅದು ಭಾಷಾ ಮತ್ತು ಸಾಕ್ಷರತಾ ಶಿಕ್ಷಣದ ಒಂದು ಸಮರ್ಪಕ ಗುರಿಯಾಗಲಾರದು ಎಂದು ಪ್ರತಿಪಾದಿಸಬಹುದಾಗಿದೆ. ಮಕ್ಕಳು ಭಾಷೆ ಮತ್ತು ಸಾಕ್ಷರತೆಯ ಕೌಶಲಗಳು ಮತ್ತು ಅಭ್ಯಾಸಗಳನ್ನು ಒಂದು ಅರ್ಥಪೂರ್ಣವಾದ ಮತ್ತು ಒಂದು ಸಬಲೀಕೃತ ರೀತಿಯಲ್ಲಿ ಸಮಾಜದಲ್ಲಿ ಬಳಸಲು ಅನುವು ಮಾಡಿಕೊಡುವಂತಹ ಒಂದು ಹೆಚ್ಚು ಮಹತ್ವದ ಗುರಿಯನ್ನು ಹೊಂದಬೇಕು. ಭಾರತದಂತಹ ಸಾಮಾಜಿಕವಾಗಿ ಅತಿ ಹೆಚ್ಚಾಗಿ ಶ್ರೇಣೀಕೃತಗೊಂಡ ಸಮಾಜದಲ್ಲಿ ಇದು ನಮ್ಮ ಅನೇಕ ಮಕ್ಕಳಿಗೆ ಭಾಷೆ ಮತ್ತು ಸಾಕ್ಷರತೆಯನ್ನು ಸಾಂಸ್ಕೃತಿಕವಾಗಿ ಪರಿಣಾಮಕಾರಿಯದ ರೀತಿಗಳಲ್ಲಿ ಬಳಸಲು ಅವಕಾಶಗಳನ್ನು ರೂಪಿಸಬೇಕು ಎಂಬುದನ್ನು ಸೂಚಿಸುತ್ತದೆ. ಭಾಷೆ ಮತ್ತು ಸಾಕ್ಷರತೆಯ ಸಾಮರ್ಥ್ಯವನ್ನು ಬಳಸಿಕೊಂಡು ಒಂದು ಘನತೆಯ ಬಾಳನ್ನು ಬದುಕಲು ಸಾಧ್ಯವಾಗಿಸುವ ಮತ್ತು ಈ ಸಾಮರ್ಥ್ಯಗಳನ್ನು ಬಳಸಿಕೊಂಡು ತಮ್ಮ ತಮ್ಮ ಬದುಕುಗಳನ್ನಷ್ಟೇ ಅಲ್ಲದೆ ತಮ್ಮ ಸಮಾಜ ಮತ್ತು ಸಮುದಾಯಗಳಲ್ಲಿನ ಎಲ್ಲರ ಬಾಳನ್ನೂ ಅರ್ಥಪೂರ್ಣವಾಗಿ ರೂಪಿಸುವಂತಾಗುವ ಸಶಕ್ತ ಪೌರರನ್ನು ತಯಾರು ಮಾಡುವುದು ಒಂದು ಪ್ರಮಾಣಕವಾದ ದೂರದೃಷ್ಟಿ ಹೊಂದಿರಬೇಕು (Luke (ಲೂಕ್), 2000).

ಭಾಷೆ ಮತ್ತು ಸಾಕ್ಷರತಾ ಶಿಕ್ಷಣದ ಗುರಿಗಳನ್ನು ಒಂದು ಸಮಗ್ರ ರೀತಿಯಲ್ಲಿ ಪರಿಕಲ್ಪಿಸಿಕೊಳ್ಳಬೇಕಾಗಿದೆ. ವಿಶಾಲ ವ್ಯಾಪ್ತಿಯುಳ್ಳ ಈ ದೃಷ್ಟಿಕೋನವನ್ನು ಬೆಂಬಲಿಸುವ ಆ ನಿರ್ದಿಷ್ಟ ಗುರಿಗಳು ಇಂತಿವೆ:

**a. ಸಾಕ್ಷರ ಜಗತ್ತುಗಳನ್ನು ಪ್ರವೇಶಿಸಲು ಪ್ರಸ್ತುತತೆಯನ್ನು ಸೃಷ್ಟಿಸುವುದು.**

ಈಗ ಭಾರತದಲ್ಲಿನ ಬಹಳಷ್ಟು ಮಕ್ಕಳು ಮೊದಲ ತಲೆಮಾರಿನ ಕಲಿಕಾರ್ಥಿಗಳು, ಅಥವಾ ತೀರಾ ಅವಕಾಶವಂಚಿತ ಪರಿಸ್ಥಿತಿಗಳಿಂದ ಬಂದ ಮತ್ತು ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳ ಕಲಿಕಾರ್ಥಿಗಳಾಗಿದ್ದಾರೆ. ಆದ್ದರಿಂದ, ಅವರು ಸಾಕ್ಷರ ಜಗತ್ತುಗಳನ್ನು ಪ್ರವೇಶಿಸಲು ಪ್ರಸ್ತುತತೆಯನ್ನು ಸೃಷ್ಟಿಸುವುದು ಅಗತ್ಯವಾಗಿ ಕೈಗೊಳ್ಳಬೇಕಾದ ಒಂದು ಮುಖ್ಯ ಕಾರ್ಯ. ಓದುವ ಮತ್ತು ಬರೆಯುವ ಕ್ರಿಯೆಗಳು ತಮ್ಮ ಶಾಲೆಯ ಒಳಗಿನ ಮತ್ತು ಹೊರಗಿನ ಬದುಕುಗಳಿಗೆ ಪ್ರಸ್ತುತತೆ ಹೊಂದಿರುವ ಅರ್ಥಪೂರ್ಣ ಹಾಗೂ ಸಂಬಂಧಿಸಿದ ಚಟುವಟಿಕೆಗಳು ಎಂಬುದನ್ನು ಮಕ್ಕಳು ಅರಿತುಕೊಳ್ಳುವಂತಾಗುವುದು ಗುರಿಯಾಗಬೇಕು.

**b. ಸಾಕ್ಷರ ಜಗತ್ತುಗಳ ಜೊತೆ ತೊಡಗಿಕೊಳ್ಳುವಿಕೆಯ ಭಾವವನ್ನು ಮೂಡಿಸುವುದು.**

ಭಾಷೆ ಮತ್ತು ಸಾಕ್ಷರತಾ ಕಲಿಕೆಗೆ ಬೇಕಾಗುವ ಒಂದು ಆಂತರಿಕ ಪ್ರೇರಣೆಯನ್ನು ಸೂಚಿಸಲು "ತೊಡಗಿಕೊಳ್ಳುವಿಕೆ" ಎಂಬ ಪದವನ್ನು ಇಲ್ಲಿ ಬಳಸಲಾಗಿದೆ. ಕಲಿಕಾರ್ಥಿಗಳು ತಮ್ಮ ಬದುಕಿಗೆ ಪ್ರಸ್ತುತವೆಂದು ಕಂಡ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಮತ್ತು ಅದರಲ್ಲೇ ಮುಂದುವರೆಯುವ ಸಾಧ್ಯತೆ ಹೆಚ್ಚು ಇರುವುದರಿಂದ ತೊಡಗಿಕೊಳ್ಳುವಿಕೆಯ ಪರಿಕಲ್ಪನೆಗೂ ಪ್ರಸ್ತುತತೆಯ ಪರಿಕಲ್ಪನೆಗೂ ಹತ್ತಿರದ ಸಂಬಂಧವಿದೆ. ಕಲಿಕೆಯು ಯಾವಾಗಲೂ ಹರ್ಷಯುಕ್ತವಾಗಿರಬೇಕು ಎಂಬ ಒಂದು ಪೂರ್ವಭಾವಿ ಷರತ್ತು ಇರಬೇಕಿಲ್ಲವಾದರೂ ತೊಡಗಿಕೊಳ್ಳುವಿಕೆಯು ಇರಬೇಕು ಎಂಬ ಪೂರ್ವಭಾವಿ ಷರತ್ತು ಇರುವುದರಿಂದ, ಅದು ಪ್ರಸ್ತುತ ಬಳಸಲಾಗುತ್ತಿರುವ "ನಲಿ-ಕಲಿ" ಎನ್ನುವ ಪರಿಭಾಷೆಗಿಂತ ಭಿನ್ನವಾದದ್ದು.

**c. ಬಹುಭಾಷಾ ಸಾಮರ್ಥ್ಯಗಳನ್ನು ಬೆಳೆಸುವುದು.**

ಭಾರತವು ಒಂದು ಬಹುಭಾಷಾ ಸಮಾಜವಾಗಿದೆ. ನಮ್ಮ ಸಮಾಜದ ಈ ಬಹುಭಾಷಾ ಸ್ವರೂಪವನ್ನು ಉಳಿಸಿಕೊಂಡು ಅದನ್ನು ಇನ್ನಷ್ಟು ಸಮೃದ್ಧಗೊಳಿಸುವ ದೂರದೃಷ್ಟಿ ಇದ್ದರೆ ಆಗ ಮಕ್ಕಳ ಬಹುಭಾಷಾ ಸಾಮರ್ಥ್ಯಗಳ ಬೆಳವಣಿಗೆಗೆ ಸಾಕಷ್ಟು ಅವಕಾಶಗಳನ್ನು ಒದಗಿಸುವುದು ಭಾಷೆ ಮತ್ತು ಸಾಕ್ಷರತಾ ಶಿಕ್ಷಣದ ಒಂದು ಮುಖ್ಯ ಗುರಿಯಾಗಿರಬೇಕು. ಕನಿಷ್ಠ, ನಮ್ಮ ದೇಶದಲ್ಲಿ ಸಮತೋಲಿತ ದ್ವಿಭಾಷಿಕತೆ ಭಾಷೆ ಮತ್ತು ಸಾಕ್ಷರತಾ ಶಿಕ್ಷಣದ ಒಂದು ಗುರಿಯಾಗಿರಬೇಕು.

**d. ಭಾಷೆಯನ್ನು ಅದರ ಮೌಖಿಕ ಮತ್ತು ಲಿಖಿತ ಇವೆರಡು ರೂಪಗಳಲ್ಲಿಯೂ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸುವುದು.**

ಎಲ್ಲ ಮಕ್ಕಳೂ (ಮೂರು ವರ್ಷದ ಮಕ್ಕಳು ಕೂಡಾ) ಶೈಕ್ಷಣಿಕ ಸನ್ನಿವೇಶಗಳಿಗೆ ಒಂದು ಅಂತರವೈಯಕ್ತಿಕದ ಸಂಭಾಷಣೆಯ ಮಟ್ಟದಲ್ಲಿ ಮಾತೃಭಾಷೆಯನ್ನು ಗ್ರಹಿಸುವ ಸಾಮರ್ಥ್ಯದೊಂದಿಗೆ ಬರುತ್ತಾರೆ. ಆದಾಗ್ಯೂ, ಶೈಕ್ಷಣಿಕ ಸನ್ನಿವೇಶಗಳು ಭಾಷಾ ಬಳಕೆಗೆ ಸಂಬಂಧಿಸಿದಂತೆ ಮಕ್ಕಳನ್ನು ಬೇರೆ ಬೇರೆ ಮಟ್ಟದ ಸಂಕೀರ್ಣತೆಗೆ ಮತ್ತು ಬೇಡಿಕೆಗಳಿಗೆ ಒಡ್ಡುತ್ತದೆ. ಮೊದಲಿಗೆ ಈ ಸನ್ನಿವೇಶಗಳಲ್ಲಿ ಮಕ್ಕಳು ತಮ್ಮ ಮಾತೃಭಾಷೆಯನ್ನು ಹೊರತುಪಡಿಸಿ ಉಳಿದ ಭಾಷೆಗಳು ಮತ್ತು ಉಪಭಾಷೆಗಳನ್ನು ಕಲಿಯಲು

ಪ್ರಾರಂಭಿಸಬಹುದು. ಎರಡನೆಯದಾಗಿ, ತಮ್ಮ ಪ್ರಥಮ ಭಾಷೆಯನ್ನೂ ಸಹ ಇನ್ನೂ ಹೆಚ್ಚು ವಿಧ್ಯುಕ್ತ ರೀತಿಗಳಲ್ಲಿ ಬಳಸುವುದನ್ನು ಕಲಿಯಲು ಪ್ರಾರಂಭಿಸಬಹುದು. ಮೂರನೆಯದಾಗಿ, ಸ್ವಲ್ಪ ಹಿರಿಯ ವಯಸ್ಸಿನ ಮಕ್ಕಳು (6 ರಿಂದ 8 ವರ್ಷಗಳ ವಯೋಮಾನ) ಲಿಖಿತ ಭಾಷೆಯನ್ನು ಕಲಿಯಲು ಶುರು ಮಾಡುತ್ತಾರೆ ಮತ್ತು ಅವರನ್ನು ಸರಳ ಕತೆಗಳಿಂದ ಹಿಡಿದು ಹೆಚ್ಚು ಸಂಕೀರ್ಣ ಮಾಹಿತಿಯುಳ್ಳ ಪುಸ್ತಕಗಳ
ವರೆಗೆ ಅನೇಕ ವಿಧದ ಲಿಖಿತ ಪಠ್ಯಗಳಿಂದ ಅರ್ಥವನ್ನು ಹೊರಸೆಳೆಯಲು ಕೇಳಲಾಗುತ್ತದೆ. ಅರ್ಥಗ್ರಹಣವು (ಅಥವಾ ಅರ್ಥ ನಿರ್ಮಾಣ) ಭಾಷೆ ಮತ್ತು ಸಾಕ್ಷರತಾ ಶಿಕ್ಷಣದ ಒಂದು ಮುಖ್ಯ ಗುರಿ, ಮತ್ತು ಅದನ್ನು ಈ ಎಲ್ಲಾ ಸಂದರ್ಭಗಳಲ್ಲಿಯೂ ಪೋಷಿಸಬೇಕು.

**e. ಭಾಷೆಯೊಂದಿಗೆ ಒಂದು ಸೌಂದರ್ಯ ಉಳ್ಳ ತೊಡಗಿಕೊಳ್ಳುವಿಕೆಯ ಭಾವವನ್ನು ಬೆಳೆಸುವುದು**.

ಅರ್ಥಗ್ರಹಣವನ್ನು ಸಾಮಾನ್ಯವಾಗಿ ಅರ್ಥ ಅಥವಾ ಮಾಹಿತಿಯನ್ನು ಹೊರತೆಗೆಯುವುದು ಎಂಬುದಾಗಿ ಅರ್ಥಮಾಡಿಕೊಳ್ಳಲಾಗಿದೆ. ಇದು ಒಂದು ಮುಖ್ಯ ಗುರಿಯಾಗಿದ್ದರೂ ಮೌಖಿಕ ಮತ್ತು ಲಿಖಿತ ರೂಪಗಳಲ್ಲಿ ಭಾಷೆಯ ಸೌಂದರ್ಯಮೀಮಾಂಸೆಗೆ ಮಕ್ಕಳು ಸ್ಪಂದಿಸುವಂತೆ ಅನುವು ಮಾಡಿಕೊಡುವುದು ಅಷ್ಟೇ ಮುಖ್ಯವಾದದ್ದು. ಮಕ್ಕಳಲ್ಲಿ ಈ ಸಾಮರ್ಥ್ಯಗಳನ್ನು ಬೆಳೆಸುವ ಸಲುವಾಗಿ ಎಳೆವೆಯಲ್ಲಿಯೇ ಅವರನ್ನು ಕಾವ್ಯ, ಸಾಹಿತ್ಯ ಮತ್ತು ಭಾಷೆಯ ಇತರ ಕಲಾ ಪ್ರಕಾರಗಳಿಗೆ ಒಡ್ಡಬೇಕು.

**f. ಬೇರೆ ಬೇರೆ ಲಿಖಿತ ಲಿಪಿಗಳನ್ನು ಸರಾಗವಾಗಿ ಬಳಸುವುದನ್ನು ಕಲಿಯುವುದು.**

ವಯೋಮಾನಕ್ಕೆ ಔಚಿತ್ಯವೆನಿಸುವ ರೀತಿಯಲ್ಲಿ ಮಕ್ಕಳನ್ನು ಬೇರೆ ಬೇರೆ ಲಿಪಿಗಳಿಗೆ ಹಂತಹಂತವಾಗಿ ಪರಿಚಯಿಸಬೇಕು. ಎಂಟು ವರ್ಷದ ಹೊತ್ತಿಗೆ ಮಕ್ಕಳು ಸರಳ ಪಠ್ಯಗಳನ್ನು ಕರಾರುವಕ್ಕಾಗಿ ವಿಸಂಕೇತಿಸಲು ಮತ್ತು ಅವುಗಳ ಕಾಗುಣಿತವನ್ನು ಹೇಳಲು ನಿಷ್ಣಾತರಾಗುವಂತೆ ಮಾಡುವುದು ಇದರ ಒಂದು ಪ್ರಮುಖ ಗುರಿಯಾಗಿರಬೇಕು. ಈ ವಿಶಾಲ ವ್ಯಾಪ್ತಿಯ ಗುರಿಯಲ್ಲಿ ಮಾತನಾಡುವ ಭಾಷೆಯ ಶಬ್ದಗಳಲ್ಲಿ ವ್ಯತ್ಯಾಸಗಳನ್ನು ಕರಾರುವಕ್ಕಾಗಿ ಗುರುತಿಸುವ ಸಾಮರ್ಥ್ಯ, ಅಕ್ಷರಗಳನ್ನು ಮತ್ತು ಅಕ್ಷರ-ಶಬ್ದಗಳ ನಡುವಿನ ಸಂಬಂಧಗಳನ್ನು ಗುರುತಿಸುವ ಸಾಮರ್ಥ್ಯ, ಪ್ರತ್ಯೇಕವಾದ ಶಬ್ದಗಳನ್ನು ಸಂಯೋಜಿಸಿ ಪದಗಳನ್ನು ರೂಪಿಸುವ ಸಾಮರ್ಥ್ಯ, ಮತ್ತು ಪದಗಳನ್ನು ಪ್ರತ್ಯೇಕವಾದ ಶಬ್ದಗಳಾಗಿ ವಿಂಗಡಿಸುವ ಸಾಮರ್ಥ್ಯವನ್ನು ಬೆಳೆಸುವಂತಹ ಹಲವು ನಿರ್ದಿಷ್ಟ ಗುರಿಗಳು ಮಿಳಿತವಾಗಿವೆ.

**g. ವ್ಯಾಪಕವಾದ ವಿವಿಧ ಉದ್ದೇಶಗಳಿಗೆ ಭಾಷೆ ಮತ್ತು ಸಾಕ್ಷರತೆಯನ್ನು ಪರಿಣಾಮಕಾರಿಯಾಗಿ ಬಳಸಲು ಕಲಿಯುವುದು.**

ಶೈಕ್ಷಣಿಕ ಸನ್ನಿವೇಶಗಳಲ್ಲಿ ಕಲಿಯಲಾಗುವುದೆಲ್ಲವೂ ಅವರ ಜೀವನಕ್ಕೆ ವ್ಯಾಪಕವಾಗಿ ಅನ್ವಯಿಸುವಂತಿರುತ್ತವೆ ಎಂಬುದನ್ನು ಮಕ್ಕಳಿಗೆ ಅವರ ಅತಿ ಸಣ್ಣ ವಯಸ್ಸಿನಿಂದಲೇ ಕಲಿಸಬೇಕು. ಅವರ ಶಾಲೆಯಲ್ಲಿನ ಕಲಿಕೆ ಹಾಗೂ ಶಾಲೆಯಿಂದಾಚೆಯ ಅವರ ಜೀವನದ ನಡುವೆ ಸಂಬಂಧವಿದೆ ಎಂಬುದನ್ನು ತೋರಿಸಲು ಪಠ್ಯಕ್ರಮವನ್ನು ಬೆಳವಣಿಗೆಗೆ ಸಂಬಂಧಿಸಿದಂತೆ ಸೂಕ್ತವಾದ ರೀತಿಗಳಲ್ಲಿ ಸ್ಫುಟವಾಗಿ ರೂಪಿಸಬೇಕಾದ ಅಗತ್ಯವಿದೆ.

**h. ಸಾಕ್ಷರ ಜಗತ್ತುಗಳೊಂದಿಗೆ ವಿಮರ್ಶಾತ್ಮಕವಾಗಿ ತೊಡಗಿಸಿಕೊಳ್ಳಲು ಕಲಿಯುವುದು.**

ಸಬಲೀಕರಣಗೊಂಡವರಾಗಿ ತಮ್ಮ ಜೀವನವನ್ನು ನಡೆಸಲು ವ್ಯಕ್ತಿಗಳಿಗೆ ಅನುವು ಮಾಡಿಕೊಡುವುದು ಶಿಕ್ಷಣದ ಒಂದು ಪ್ರಧಾನ ಗುರಿಯಾಗಿದ್ದರೆ, ಆಗ ಶೈಕ್ಷಣಿಕ ಸನ್ನಿವೇಶಗಳಲ್ಲಿ ವಿಚಾರ ಮತ್ತು ಪಠ್ಯಗಳೊಂದಿಗೆ ವಿಮರ್ಶಾತ್ಮಕವಾಗಿ ತೊಡಗಿಸಿಕೊಳ್ಳುವುದನ್ನು ಅವರಿಗೆ ಕಲಿಸುವ ಅಗತ್ಯವಿದೆ. ಇದನ್ನು ಚಿಕ್ಕ ವಯಸ್ಸಿನಿಂದಲೇ ಆರಂಭಿಸಬಹುದು. ಉದಾಹರಣೆಗೆ, ಚಿಕ್ಕ ಮಕ್ಕಳು ತಮ್ಮ ನಿತ್ಯದ ಬದುಕಿನ ಅನುಭವಗಳನ್ನು ಬೆಳವಣಿಗೆಗೆ ಸಂಬಂಧಿಸಿದಂತೆ ತೀರ ಸೂಕ್ಷ್ಮವಾದ ರೀತಿಯಲ್ಲಿ ಚರ್ಚಿಸಲು ಪ್ರೋತ್ಸಾಹಿಸಬಹುದು.